**ಸಾಕ್ಷಿಯನ್ನು ದಿನಾಂಕ 02.08.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಎದುದಾರರ ಪರ ಶ್ರೀಮತಿ ಆರ್.ಎಸ್.ಎಸ್ ವಕೀಲರಿಂದಃ**

1. ಮೂಲ ಅರ್ಜಿ ಸಲ್ಲಿಸುವಾಗ ನಾನು ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೆ. ಆಗ ನನಗೆ ಸರ್ಕಾರದಿಂದ ಗೌರವ ಧನ ಬರುತ್ತಿತ್ತು ಎನ್ನುತ್ತಾರೆ. ನಾನು ನಿವೃತ್ತಿಯಾದಾಗ ನನಗೆ ಮಾಸಿಕ ರೂ.5 ಸಾವಿರ ಗೌರವ ಧನ ಬರುತ್ತಿತ್ತು. ನಾನು ಅಂಗನವಾಡಿಯಲ್ಲಿ ಖಾಯಂ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ ಮತ್ತು ನನಗೆ ರೂ.5 ಸಾವಿರಕ್ಕೂ ಹೆಚ್ಚು ಸಂಬಳ ಸಿಗುತ್ತಿತ್ತು ಎಂದರೆ ಸರಿಯಲ್ಲ.
2. ಮೂಲ ಅರ್ಜಿಯಲ್ಲಿ ಆದ ಆದೇಶಕ್ಕೆ ಅನುಗುಣವಾಗಿ ಎದುರುದಾರರು ನಿರಂತರವಾಗಿ ನನಗೆ ಜೀವನಾಂಶ ಪಾವತಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಎದುರುದಾರ ಜೀವನಾಂಶ ಬಾಕಿ ಉಳಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಈ ಹಿಂದೆ ಹೆಚ್ಚುವರಿ ಜೀವನಾಂಶ ಕೋರಿ ನಾನು ಸಲ್ಲಿಸಿದ ಅರ್ಜಿ ವಜಾ ಆಯಿತ್ತು ಎಂದರೆ ಸಾಕ್ಷಿ ಕೋವಿಡ್ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಬರಲು ಆಗಿಲಿಲ್ಲ ಹಾಗಾಗಿ ನಾನು ಸಲ್ಲಿಸಿದ ಅರ್ಜಿ ವಜಾ ಆಗಿತ್ತು ಎನ್ನುತ್ತಾರೆ.
3. ನನಗೆ ಈಗಲೂ ಸರ್ಕಾರದಿಂದ ಸಂಬಳ ಸಿಗುತ್ತಿದೆ ಎಂದರೆ ಸರಿಯಲ್ಲ. ಎದುರುದಾರರಿಗೆ ಈಗ 75 ವರ್ಷ ವಯಸ್ಸಾಗಿದೆ ಎಂದರೆ ಸರಿ. ಎದುರುದಾರರು ಹಿಂದಿನಿಂದಲೂ ಖಾಸಗಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಸುಳ್ಳು. ಸಾಕ್ಷಿ ಪುನಃ ನನ್ನ

This is a True Copy of the Court Records Online. Authenticated @ districts.ecourtsindia.com/cnr/KASM310052432022/truecopy/order-2.pdf

ಮದುವೆಯಾದಾಗ ಅವರು ಅಬಕಾರಿ ಇಲಾಖೆಯಲ್ಲಿ ತತ್ಕಾಲಿಕ ನೌಕರನಾಗಿ ಕೆಲಸ ಮಾಡುತ್ತಿದ್ದರು ಮತ್ತು ಅವರಿಗೆ ಜಮೀನು ಸಹ ಇದೆ ಎನ್ನುತ್ತಾರೆ. ಭದ್ರಾವತಿಯಲ್ಲಿದ್ದಾಗ ಎದುರುದಾರ ಅಬಕಾರಿ ಇಲಾಖೆಯಲ್ಲಿ ನೌಕರಿ ಮಾಡಿದ್ದರು ಎಂದರೆ ಸಾಕ್ಷಿ ಆಗ ನಾವು ಚನ್ನಗಿರಿಯಲ್ಲಿ ವಾಸವಿದ್ದೆವು ಎನ್ನುತ್ತಾರೆ. ಅಬಕಾರಿ ಇಲಾಖೆ ನೌಕರಿ ಬಿಟ್ಟಾಗಿನಿಂದ ಎದುರುದಾರ ಅವರ ಊರಿನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಎದುರುದಾರನಿಗೆ ಸ್ವಂತ ಪುಸ್ತಕದ ಅಂಗಡಿ ಇತ್ತು, ಅದರಲ್ಲಿ ನಷ್ಟ ಆದ ನಂತರ ಅವರು ಸ್ವಂತ ವಾಹನ ಇಟ್ಟುಕೊಂಡು ಅದನ್ನು ಚಾಲನೆ ಮಾಡುತ್ತಿದ್ದರು ಎನ್ನುತ್ತಾರೆ. 5 ವರ್ಷದ ಹಿಂದೆ ಆದ ಅಪಘಾತದಲ್ಲಿ ಎದುರುದಾರನ ಬಲಗೈ ಸಂಪೂರ್ಣ ಮುರಿದಿದೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ 20 ವರ್ಷದ ಹಿಂದೆ ಅಪಘಾತ ಆಗಿತ್ತು ಎನ್ನುತ್ತಾರೆ. ಎದುರುದಾರನಿಗೆ ಬಲಗೈ ಎತ್ತಲು ಸಾಧ್ಯವಿಲ್ಲ ಎನ್ನುವುದು ಸುಳ್ಳು. ಸಾಕ್ಷಿ ಸ್ವ ಇಚ್ಚೆಯಿಂದ 2014 ರವರೆಗೂ ಎದುರುದಾರರು ಚಾಲಕನಾಗಿ ಕೆಲಸ ಮಾಡುತ್ತಿದ್ದರು ಮತ್ತು ಈಗಲೂ ಕೆಲಸ ಮಾಡುತ್ತಿದ್ದಾರೆ ಎನ್ನುತ್ತಾರೆ. ಪ್ರಸ್ತುತ ಎದುರುದಾರನಿಗೆ ಯಾವುದೇ ಸ್ವಂತ ಉದ್ಯೋಗ ಇಲ್ಲ ಎನ್ನುವುದು ಸುಳ್ಳು. ಸಾಕ್ಷಿ ಪುನಃ ಅವರಿಗೆ ಹಾರ್ಡ್ ವೇರ್ ಅಂಗಡಿ ಇದೆ ಮತ್ತು ವ್ಯವಸಾಯದ ಜಮೀನು ಇದೆ ಎನ್ನುತ್ತಾರೆ. ಹಾರ್ಡ್ ವೇರ್ ಅಂಗಡಿ ಇದೆ ಎಂದು ತೋರಿಸಲು ದಾಖಲೆ ಇದೆ.

4. ಎದುರುದಾರನ ಹೆಸರಿಗೆ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿ ಉದ್ದೇಶಪೂರ್ವಕವಾಗಿ ಅವರ ಹೆಂಡತಿ ಹೆಸರಿಗೆ ಜಮೀನು ಮಾಡಿದ್ದಾರೆ ಎನ್ನುತ್ತಾರೆ. ಆ

This is a True Copy of the Court Records Online. Authenticated @ districts.ecourtsindia.com/cnr/KASM310052432022/truecopy/order-2.pdf

www.ecourtsindia.com

ಸಂಬಂಧ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಎದುರುದಾರನಿಗೆ 75 ವರ್ಷ ವಯಸ್ಸಾಗಿರುವುದರಿಂದ ಅವರು ಯಾವುದೇ ಉದ್ಯೋಗ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಎದುರುದಾರನ ಮೊದಲನೇ ಹೆಂಡತಿಯ ಒಬ್ಬ ಮಗನಿಗೆ ಕಣ್ಣು ಕಾಣುವುದಿಲ್ಲ ಮತ್ತು ಆತನನ್ನು ಎದುರುದಾರನೇ ನೋಡಿಕೊಳ್ಳುತ್ತಾರೆ ಎನ್ನುವುದು ಸುಳ್ಳು. ಎದುರುದಾರನ ಒಬ್ಬ ಮಗಳು ಅಕಾಲಿಕವಾಗಿ ಮೃತ ಪಟ್ಟಿದ್ದರಿಂದ ಆಕೆಯ ಮಕ್ಕಳನ್ನು ಎದುರುದಾರರೇ ನೋಡಿಕೊಳ್ಳುತ್ತಿದ್ದಾರೆ ಎನ್ನುವುದು ಸುಳ್ಳು. ಸಾಕ್ಷಿ ಪುನಃ ಎದುರುದಾರನ ಅಳಿಯ ಡಿಸಿ ಕಚೇರಿಯಲ್ಲಿ ಕೆಲಸ ಮಾಡಿಕೊಂಡು ಮಕ್ಕಳನ್ನು ನೋಡಿಕೊಳ್ಳುತ್ತಾರೆ ಎನ್ನುತ್ತಾರೆ. ಎದುರುದಾರನ ಅಳಿಯ ಆತನ ಇಬ್ಬರು ಮಕ್ಕಳನ್ನು ಎದುರುದಾರರನ ಜೊತೆ ಬಿಟ್ಟಿದ್ದಾರೆ ಎಂದರೆ ಸಾಕ್ಷಿ ತಾಯಿ ಇಲ್ಲದ ಕಾರಣ ಮಕ್ಕಳನ್ನು ಅಜ್ಜ-ಅಜ್ಜಿ ಜೊತೆ ಬಿಟ್ಟಿದ್ದಾರೆ ಆದರೆ ಅವರ ಖರ್ಚು ವೆಚ್ಚವನ್ನು ಎದುರುದಾರನ ಅಳಿಯನೇ ನೋಡಿಕೊಳ್ಳುತ್ತಾರೆ ಎನ್ನುತ್ತಾರೆ.

5. ನನಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಅವರೆಲ್ಲರೂ ಉದ್ಯೋಗದಲ್ಲಿದ್ದಾರೆ ಎಂದರೆ ಸಾಕ್ಷಿ ನನ್ನ ಮಕ್ಕಳು ಕೂಲಿ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಿದ್ದಾರೆ ಮತ್ತು ನಾನು ಒಬ್ಬಳೇ ವಾಸವಿದ್ದೇನೆ ಎನ್ನುತ್ತಾರೆ. ನನ್ನ ಮಕ್ಕಳು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು ನಾನು ಅವರ ಜೊತೆಯೇ ವಾಸವಿದ್ದೇನೆ ಮತ್ತು ನನಗೆ ಸ್ವಂತ ಮನೆ ಹಾಗೂ ಜಮೀನು ಇದೆ ಎನ್ನುವುದು ಸುಳ್ಳು. ಜಮೀನಿನಲ್ಲಿ ಭತ್ತ ಬೆಳೆದು ಪ್ರತ್ಯೇಕ ಆದಾಯ ಗಳಿಸುತ್ತಿದ್ದೇನೆ ಎನ್ನುವುದು ಸುಳ್ಳು. 75 ವರ್ಷ ವಯಸ್ಸಾಗಿರುವ ಎದುರುದಾರ ನನಗೆ

This is a True Copy of the Court Records Online. Authenticated @ districts.ecourtsindia.com/cnr/KASM310052432022/truecopy/order-2.pdf

www.ecourtsindia.com

ಜೀವನಾಂಶ ಕೊಡಲು ಸಮರ್ಥನಾಗಿಲ್ಲ ಎನ್ನುವುದು ಸುಳ್ಳು. ಎದುರುದಾರನಿಗೆ ಯಾವುದೇ ಆಧಾಯ ಇಲ್ಲ ಎನ್ನುವುದು ಸುಳ್ಳು. ನಾನು ಕೇಳಿರುವಷ್ಟು ಹೆಚ್ಚುವರಿ ಜೀವನಾಂಶ ಕೊಡಲು ಎದುರುದಾರ ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**Sd/-**
**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**

This is a True Copy of the Court Records Online. Authenticated @ districts.ecourtsindia.com/cnr/KASM310052432022/truecopy/order-2.pdf

www.ecourtsindia.com